ಶ್ರೀ ಮಾಲ ಮರಿಯಪ್ಪ.—ಉತ್ತರದಲ್ಲಿ 4ನೇ ಕೆರೆಯಾದ ಮುಗುದ ಬೆಟ್ಟ ತಿಪ್ಪಯ್ಯನ ಕೆರೆಯ ಕಾಮಗಾರಿಯನ್ನು ಬಿಟ್ಟು ಬಿಡಲಾಗಿದೆ ಎಂದು ಹೇಳಿದೆ. ಅದಕ್ಕ ಕಾರಣವೇನು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಹಿಂದೆ ಮುಂಜೂರು ಆಗಿತ್ತು. ಆಗ ನುಮಾರು 2,467 ರೂಪಾಯಿಗಳು ಖರ್ಚಾಗಿ ಕೈಬಿಡಲಾಗಿದೆ. ಶ್ರೀ ಭೀಮಯ್ಯ ಎನ್ನುವವರು ಮುಂದೆ ಬಂದು ಕೆಲಸಮಾಡಿ ಈಗ ಕೈಬಿಟ್ಟರು. 18-1-1952 ರಲ್ಲಿ ಈ ಕೆಲಸ ತೆಗೆದುಕೊಂಡಿತ್ತು. ಈಚೆಗೆ ಯಾರೂ ಬಂದಿಲ್ಲ. ಅದಕ್ಕೋಸ್ಕರ ಕೈಬಿಡಲಾಗಿದೆ.

ಶ್ರೀ ಮಾಲ ಮರಿಯಪ್ಪ.—ಟೆಂಡರುಗಳನ್ನು ಏನಾದರೂ ಕರೆದು ಈ ಕೆಲಸ ಪೂರೈಸಿದ್ದೀರಾ? ಕೆಲಸ ಮಾಡುವುದಕ್ಕೆ ಬರಲಿಲ್ಲ ಎಂದರೆ ಕೆಲಸ ಪೂರೈಸುವುದಕ್ಕೆ ಏನು ಕ್ರಮವಿದೆಯೋ ಆ ಕ್ರಮಗಳನ್ನು ಕೈಗೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ರಮಗಳೆಲ್ಲವನ್ನೂ ಕೈಗೊಂಡಾದ ಮೇಲೆ, ಯಾರೂ ಕಂಟ್ರಾಕ್ಟರ್ ಬಾರದೆ ಇರುವ ಕಾರಣ, ಅಚ್ಚುಕಟ್ಟುದಾರರಿಗೇ ಕೆಲಸ ಕೊಡಬೇಕೆಂದು ಆಲೋಚನೆ ಮಾಡಿದೆವು. ಶ್ರೀ ಭೀಮಯ್ಯನವರು ಕೆಲಸ ಮಾಡುತ್ತೇನೆಂದು ಒಪ್ಪಿಕೊಂಡರೂ ಕೆಲಸ ಮಾಡುತ್ತಾ ಇಲ್ಲ. ಬಹಳ ಕಾಲದಿಂದ ಯಾರೂ ಮುಂದೆ ಬಾರದೇ ಇರುವುದರಿಂದ ಕೆಲಸಮಾಡಿಲ್ಲ.

ಶ್ರೀ ಮಾಲ ಮರಿಯಪ್ಪ.—ರೈತರು ಮುಂದೆ ಬಂದರೆ ಬೇರೆಯವರಿಗೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರೆಯವರು ಯಾರಾದರೂ ಬಂದ ಪಕ್ಷದಲ್ಲಿ ಅದನ್ನು ಪುನರಾಲೋಚನೆ ಮಾಡುತ್ತೇವೆ.

ಶ್ರೀ ಮಾಲ ಮರಿಯಪ್ಪ.—ಮುಗುದ ಬೆಟ್ಟ ಹೊಸ ಕೆರೆ ಪ್ರಾಜೆಕ್ಟು is being examined ಎಂದು ಹೇಳೋಣವಾಗಿದೆ. 15 ವರ್ಷಗಳಿಂದ ಈ ಕೆರೆಯ ಅಂದಾಜುಗಳನ್ನು ಮಾಡುವುದು, ಮುಂದಕ್ಕೆ ಹಾಕುತ್ತಾ ಇರುವುದು, ಹೀಗೆಯೇ ನಡೆಯುತ್ತಾ ಇದೆಯಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ 3-2-55ರ latest position ಏನೆಂದರೆ, ಆ ಕೆರೆಯ ಅಂದಾಜು ಶಿಫಾರ್ಸು ಆಗಿ ಚೀಫ್ ಇಂಜನಿಯರ್‌ಗೆ ಬಂದಿದೆ.

ಶ್ರೀ ಮಾಲ ಮರಿಯಪ್ಪ.—ಮಾನ್ಯ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ percentage of return ಕಡಮೆ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ, ಅದು ತೀರ್ಮಾನವಾಯಿತೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮ ಪ್ರೋತ್ಸಾಹನೆಗೆ ಉತ್ತರ ಕೊಡುತ್ತಾ, ಆ ಸಮಿತಿಯವರು ಶಿಫಾರಸು ಮಾಡಿದ್ದಾರೆಂದು ಹೇಳಿದೆ, ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಮಾಲ ಮರಿಯಪ್ಪ.—ಹೀಗೆ ಕಡಮೆ ಮಾಡದಿದ್ದರೆ ಬಹಳ ಕೆರೆಗಳ ಕಾಂಗಾರಿಯನ್ನು ತೀಗೆದು ಕೊಳ್ಳುವುದಕ್ಕಾಗುವುದಿಲ್ಲವೆಂಬುದು ಗೊತ್ತಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯದಲ್ಲಿ ಬೇಗ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಮನಸ್ಸು ಮಾಡಿದೆ.

ಶ್ರೀ ಮುದ್ದುರಾಮಯ್ಯ.—ಕೊರಟಗೆರೆ ತಾಲ್ಲೂಕಿನಲ್ಲಿ ಒಡೆದು ಹೋಗಿರುವ ಅನೇಕ ಕೆರೆಗಳು ಈ ಪಟ್ಟಿಯಲ್ಲಿ ಸೇರಿಲ್ಲ, ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ವರದಿಯ ಪ್ರಕಾರ ಎಲ್ಲ ಕೆರೆಗಳನ್ನೂ ಸೇರಿಸಿದೆ.

ಶ್ರೀ ಮುದ್ದುರಾಮಯ್ಯ.—ಅಳಾಲಸಂದ್ರ ವೆಂಕಟಾಪುರದ ಕೆರೆ ಮತ್ತು ಪುಟ್ಟಸಂದ್ರದ ಕೆರೆಗಳಿಗೆ ಅಂದಾಜುಗಳು ತಯಾರಾಗಿ irrigation enquiry ನಡೆದಿರುವದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳಿದ ಮೇಲೆ ಅದನ್ನು ವಿಚಾರ ಮಾಡುತ್ತೇನೆ ; ಈಗ ಕೂಡ ನನಗೆ ಬಂದಿರುವ ಪಟ್ಟಿಯಲ್ಲಿ ಆ ಕೆರೆಗಳ ಹೆಸರಿಲ್ಲ.

Sri R. CHENNIGARAMIAH.—The last one in the list—Vajjanakurke Tank—what is the estimate for this tank ?

Sri H. M. CHANNABASAPPA.—Rs. 36,000.

Sri R. CHENNIGARAMIAH.—From how long is this case pending before the Government ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚೀಫ್ ಇಂಜಿನಿಯರಿಗೆ ಇದನ್ನು 'ಎಕ್ಸ್‌ಪ್ಲೈರಿ'ಗೆ ಕಳುಹಿಸಿದ್ದೇವೆ.

Sri R. CHENNIGARAMIAH.—It is mentioned that a committee is constituted. What is the committee ?

Sri H. M. CHANNABASAPPA.—Nagan Gowda Committee.

Sri R. CHENNIGARAMIAH.—What for is this committee constituted ?

Sri H. M. CHANNABASAPPA.—To rationalise the water rates and contribution and etc.

Sri R. CHENNIGARAMIAH.—For the restoration of this tank, the estimate has been prepared by the Engineer and sent to Government and is pending before the Government from a very long time. Is it necessary to send it back again to this committee ?

Sri H. M. CHANNABASAPPA.—Certain water rates and contributions were proposed and Government has gone into the question and certain revised water rates and contribution have to be proposed. It has been sent back to the Assistant Engineer and the Executive Engineer has been directed to go into the matter and enquire the ryots with regard to the water rates and contribution.

---

## Sugar Factory in Hiriyur

*Q.*—324. Sri V. MASIYAPPA (Hiriyur).—

Will the Government be pleased to state :—

(*a*) whether the people of Hiriyur have been requested to start a Sugar Factory in Hiriyur ;

(*b*) the action taken by them on the representation ?

A.—Sri H. M. CHANNABASAPPA (Minister for Industries).—

(a) No; but the people of Hiriyur have represented that a Sugar Factory might be started there.

(b) The matter is under examination.

ಶ್ರೀ ವಿ. ಮಸಿಯಪ್ಪ.—ನನ್ನ ಪ್ರಶ್ನೆ 'whether the people of Hiriyur have requested to start a sugar factory' but it is printed as 'have been requested . . .'' ಇದರಲ್ಲಿ ಮುದ್ರಣದಲ್ಲಿ ತಪ್ಪಿದೆ.

Mr. SPEAKER.—But there is the further reply, it should satisfy the Member.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ವಾಣೀವಿಲಾಸ ಸಾಗರದ ನಾಲಾ ಬೈಲಿನಲ್ಲಿ ಸುಮಾರು 18 ಸಾವಿರ ಎಕರೆ ತರಿ ಅಚ್ಚುಕಟ್ಟಿದೆಯೆಂಬುದು ಗೊತ್ತಿದೆಯೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—16 ಸಾವಿರ ಎಕರೆ ಇದೆಯೆಂದು ಗೊತ್ತಿದೆ.

ಶ್ರೀ ವಿ. ಮಸಿಯಪ್ಪ.—ರೀಸರ್ವೇ ಆಗಿ 18 ಸಾವಿರ ಎಕರೆವರೆಗೆ ಸೇರಿಸಬಹುದೆಂದು ವರದಿ ಬಂದಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕರಿಯಾಳ (ಗಾಯತ್ರಿ) ಜಲಾಶಯದ ಕೆಳಗೆ ಸುಮಾರು ಎರಡು ಸಾವಿರ ಚಿಲ್ಲರೆ ಎಕರೆಯಷ್ಟು ಒಂದು ಅಥವಾ ಒಂದೂವರೆ ವರ್ಷದೊಳಗೆ ನೀರಾವರಿಗೆ ಬರುತ್ತದೆ. ಇದು ಆದನಂತರ, ಈ ಎರಡು ಸಾವಿರ ಸೇರಿಸಬೇಕೇ ಎಂಬುದನ್ನು ವಿಚಾರ ಮಾಡುತ್ತೇವೆ.

Mr. SPEAKER.—Sri Masiappa, they have not refused; they have said that it is under examination; therefore, you can place all the facts before the Government.

ಶ್ರೀ ವಿ. ಮಸಿಯಪ್ಪ.—ಹಿರಿಯೂರು ತಾಲ್ಲೂಕು ನಾರಾಯಣಪುರ ಜಲಾಶಯದ ಕೆಳಗೆ ಎರಡು ಸಾವಿರ ಎಕರೆ, ಪರಶುರಾಮಪುರದ ಕೆಳಗೆ ಎರಡು ಸಾವಿರ ಎಕರೆ ನೀರಾವರಿಗೆ ಬರುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್ ಎಂ. ಚನ್ನಬಸಪ್ಪ.—ನಾರಾಯಣಪುರದ ಕೆರೆ ಕೆಳಗೆ ಎರಡು ಸಾವಿರ ಎಕರೆ ತರಿಯಾಗುತ್ತದೆ.

ಶ್ರೀ ವಿ. ಮಸಿಯಪ್ಪ.—ಹಿರಿಯೂರು ತಾಲ್ಲೂಕು ವಾಣೀವಿಲಾಸ ಸಾಗರದ ಅಚ್ಚುಕಟ್ಟಿನಲ್ಲಿರುವ ಪ್ರದೇಶ ಬಾಕಿ ಬೆಳೆಗಳಿಗಿಂತ ಹೆಚ್ಚಾಗಿ ಕಬ್ಬಿನ ಬೆಳೆಗೆ ಉತ್ಕೃಷ್ಟವೆಂದು ತಜ್ಞರೂ ವ್ಯವಸಾಯ ಇಲಾಖೆಯವರೂ ಅಭಿಪ್ರಾಯ ಕೊಟ್ಟಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಬಂದಿಲ್ಲ. Not that I know of.

Mr. SPEAKER.—They have not refused. They have said that it is under examination. Therefore, you can place all the facts before the Government. When the answer is favourable, you should not try to get a negative reply.

ಶ್ರೀ ವಿ. ಮಸಿಯಪ್ಪ.—ಯಾರೂ negative ಮಾಡುವ ಹಾಗಿಲ್ಲ; ಉತ್ತರವಲ್ಲಿದೆ. ಈ ಸರ್ಕಾರದವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಬೇಕಾದರೆ ವರದಿಯನ್ನು ತರಿಸಿಕೊಂಡು ನೋಡಲಿ.

ಹಿರಿಯೂರಿಗೆ ಸಕ್ಕರೆ ಕಾರ್ಖಾನೆಯನ್ನು ಕೊಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಸಾರಿ ಪರಿಶೀಲನೆ ಮಾಡಿದ್ದೇವೆ; ಮಾನ್ಯ ಸದಸ್ಯರು ಹೇಳುವ ಅಭಿಪ್ರಾಯವನ್ನು ಮನಸ್ಸಿನಲ್ಲಟ್ಟುಕೊಂಡು ಪುನಃ ಪರಿಶೀಲನೆ ಮಾಡುತ್ತೇವೆ.

Sri A. BHEEMAPPA NAIK.—In view of the Naranapura project, the Gayathri project and the Vani Vilas Sagara, all these being near about but still convenince not being available, will the Government appoint an expert committee to go in detail into all these questions?

Sri H. M. CHANNABASAPPA.—I do not quite follow for what purpose.

Sri A. BHEEMAPPA NAIK.—To start a sugar factory there. Considering the wet area in which sugar cane can be grown and conveniences available.....

Sri H. M. CHANNABASAPPA.—There are certain conveniences which are visible. I do not think there is any need for a committee to examine whether power is available or not, or whether railway connection is available or not or whether transport facilities are available or not. All that is important is the availability of wet area for which we can supply water throughout the year. If we get sufficient area, then the question of locating a sugar factory comes in. According to the latest information available, certain facts are disclosed. In the light of certain other facts disclosed by the Hon'ble Member, Government will certainly consider if it is feasible to locate a factory there.

Sri A. BHEEMAPPA NAIK.—Will the Government direct an investigation to be done in view of the availability of wet area under the Naranapura project, the Gayathri project and the Vani Vilas Sagara?

Sri H. M. CHANNABASAPPA.—We will instruct the officers to take into consideration all these aspects and also

the other suggestions that the Hon'ble Member could give.

## New Roads in Bellary District after merger.

*Q.*—75. Sri K. Kotra BASAVANA GOUD (Kudligi).—

Will the Government be pleased to state :—

(*a*) the new roads laid out in Bellary District after its merger with Mysore State;

(*b*) the number of bridges constructed in Bellary District after its merger ?

*A.*—Sri H. M. CHANNABASAPPA (Minister for Industries).—

(*a*) No new State Fund Roads have been laid out. The following inter-village roads have been constructed :—

1. Formation of a road from Halavagal to Kunchur.
2. Approach road at Nagathi Basapur.
3. Road from Holal to Holal Ferry.
4. Road from Holagundi to Bhavihalli.
5. Kudligi-Hosahalli Road.
6. Chornur-Bommagatta Road.

The formation from Kottur to Bennikal and to Meenakere has been sanctioned.

(*b*) The following seven bridge works are in progress :—

1. Constructing a bridge at mile 31/8 of H.M.F. Road.
2. Constructing a causeway at mile 20/3-4 of Adony-Siruguppa Road.
3. Constructing a bridge at mile 11/5 of H.K.K.S.T. Road across Chikkahagari.
4. Constructing a bridge at mile 8/7 of H.K.K.S.T. Road across Bennihallihalla.
5. Constructing a bridge at mile 13/3 of H.K.K.S.T. Road across Marur halla.
6. Constructing a bridge at mile 28/8 of H.M.F. Road.
7. Constructing a bridge at mile 23/2 of Tornagal-Sandur Road.

ಶ್ರೀ ಕೆ. ಕೊಟ್ರ ಬಸವನಗೌಡ.—ಗ್ರಾಮಾಂತರ ರಸ್ತೆಗಳು ಇಷ್ಟಿಷ್ಟು ಆಗಿವೆ ಎಂದು ಪಟ್ಟಿಕೊಟ್ಟಿದ್ದೀರಿ, ಇವುಗಳ ಕೆಲಸ ಪೂರ್ತಿಯಾಗಿದೆಯೇ ?

* ಶ್ರೀ ಎಚ್. ಎಂ. ಚನ್ನಬಸಪ್ಪ.—ಇವುಗಳಲ್ಲಿ ಕೊಟ್ಟೂರುಬೆ-ನ್ನಿಕಲ್-ಮೀನಕೆರೆ ರಸ್ತೆ ಮಾತ್ರ ಮುಂಜೂರಾಗಿದೆ, ಬಾಕಿ ರಸ್ತೆಗಳು ಪೂರ್ತಿಯಾಗಿವೆ.

ಶ್ರೀ ಕೆ. ಕೊಟ್ರ ಬಸವನಗೌಡ.—ಈ ಪೂರ್ತಿಯಾಗಿರುವುದರಲ್ಲಿ ಮೆಟಲ್ ಆಗಿರುವುದೆಷ್ಟು, ಆಗದೇ ಯಿರುವುದೆಷ್ಟು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಕೊಟ್ರ ಬಸವನಗೌಡ.—ಇದರಲ್ಲಿ ಅನೇಕ ರಸ್ತೆಗಳು ಮೆಟರ್ ಆಗಿಲ್ಲವೆಂದು ಗೊತ್ತಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜಿನಲ್ಲಿ provide ಮಾಡಿಸಿದ್ದರೆ ಆಗಿರುತ್ತದೆ, ಇಲ್ಲದಿದ್ದರೆ ಇಲ್ಲ.

ಶ್ರೀ ಕೆ. ಕೊಟ್ರ ಬಸವನಗೌಡ.—ರಸ್ತೆಗಳಿಗೆ ಬರೀ earthwork ಮಾಡಿದರೆ ರಿಪೇರಿ ಪೂರ್ತಿಯಾದ ಹಾಗಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟಕ್ಕೆ ಅಂದಾಜು ತಯಾರಾಗಿರುತ್ತದೆಯೋ ಅಷ್ಟೂ ಖರ್ಚಾದರೆ ಕೆಲಸ ಮುಗಿಯಿತು ಎಂದು ಭಾವನೆ.

ಶ್ರೀ ಕೆ. ಕೊಟ್ರ ಬಸವನಗೌಡ.—ಜಲ್ಲಿ ಕೆಲಸವನ್ನು ಮಾಡಿನದೆ ಬರೀ ಮಣ್ಣು ಕೆಲಸಕ್ಕೆ ಮುಂಜೂರು ಮಾಡಿದರೆ ಅಲ್ಲಿಗೆ ಮುಗಿಯುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ಜಲ್ಲಿ ಕೆಲಸವಾಗಬೇಕು, ನಂತರ ಟಾರ್ ಹಾಕಬೇಕು, ನಂತರ ಸಿಮೆಂಟ್ ಹಾಕಬೇಕು. ಹೀಗೆ stage by stage ಆಗಬೇಕು. ಈಗ ನದ್ಯಕ್ಕೆ ಮಣ್ಣಿನ ಕೆಲಸ ಪೂರ್ತಿಯಾಗಿದೆ.

ಶ್ರೀ ಕೆ. ಕೊಟ್ರ ಬಸವನಗೌಡ.—ಸೇತುವೆಗಳೆಲ್ಲ ಯಾವ stage ನಲ್ಲಿವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸೇತುವೆಗಳ ವಿಷಯದಲ್ಲಿ ಇನ್ನೊಂದು ಸಂದರ್ಭದಲ್ಲಿ ನಾನಾಗಲೇ ತಿಳಿಸಿದ್ದೇನೆ. ಅದನ್ನು ಪುನಃ ಹೇಳುತ್ತೇನೆ.

1. Constructing a causeway at mile 20/3-4 of Adony-Siruguppa Road.—Work almost completed.

2. Constructing a bridge at mile 31/8 of H.M.F. Road 19ನೇ ಜನವರಿ 1953 ರಲ್ಲಿ ಮುಂಜೂರಾಗಿ ಕೆಲಸ ನಡೆಯುತ್ತಿದೆ.

3. Constructing a bridge at mile 11/5 of H.K.K.S.T. Road across Chikkahagari.—ಅಂದಾಜು ಮುಂಜೂರಾಗಿದೆ. ಟೆಂಡರುಗಳು ಕೂಡ ಮುಂಜೂರಾಗುವುದರಲ್ಲಿದೆ.

4. Constructing a bridge at mile 8/7 H.K.K.S.T. Road across Bennihallihalla—ಅಂದಾಜು ಮುಂಜೂರಾಗಿದೆ. ಟೆಂಡರುಗಳು ಸರ್ಕಾರದ ಮುಂದೆ ಇವೆ.

5. Constructing a bridge at mile 13/3 of H.K.K.S.T. Road across Marur halla.—ಅಂದಾಜು ಮುಂಜೂರಾಗಿ, ಟೆಂಡರುಗಳು ಸರ್ಕಾರದವರ ಪರಿಶೀಲನೆಯಲ್ಲಿವೆ.